# ಕಾಂಗರೂ ನಾಡನ್ನು ಕಂಗೆಡಿಸಿದ ಕಾಡ್ಗಿಚ್ಚು





**ಕಳೆದ ನಾಲ್ಕು ದಶಕಗಳಲ್ಲಿ ಹಿಂದೆಂದೂ ಕಾಣದಷ್ಟೂ ಭೀಕರವಾದ ಕಾಳ್ಗಿಚ್ಚಿನಿಂದ ಆಸ್ಟ್ರೇಲಿಯಾ ತತ್ತರಿಸಿದೆ. ಮಾಜಿ ಪ್ರಧಾನಮಂತ್ರಿ ಟೋನಿ ಅಬಟ್ ಮಿಕ್ಕವರಂತೆ ಸಮವಸ್ತ್ರ ಧರಿಸಿ ಬೆಂಕಿಯಾರಿಸುವುದರಲ್ಲಿ ನಿರತರಾಗಿದ್ದಾರೆ. ಅವರ ಸುತ್ತ ಬಾಜಾಬಜಂತ್ರಿ ಇಲ್ಲ. ಅಬಟ್ ಅವರಂತೆ ಮತ್ತೂ ಕೆಲವು ನಾಯಕರು ಸ್ವಯಂಸೇವಕರಂತೆ ಬೀದಿಗಿಳಿದಿದ್ದಾರೆ. ಕಾಂಗರೂ ನಾಡಿನ ಕಾಳ್ಗಿಚ್ಚಿನ ವಿದ್ಯಮಾನವನ್ನು ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಕನ್ನಡದ ಕಥೆಗಾರ, ವಿಜ್ಞಾನ ಲೇಖಕ ಸಿಡ್ನಿ ಶ್ರೀನಿವಾಸ್ 'ಸುಧಾ'ಕ್ಕಾಗಿ ವರದಿ ಮಾಡಿದ್ದಾರೆ.**

ಮನೆಯ ಮುಂದೆ ಮತ್ತು ಹಿಂದೆ ನಗುನಗುತ್ತಾ ಅರಳಿದ್ದ ಡೇಲಿಯಾ ಹೂಗಳು ಒಣಗಿಹೋಗಿವೆ, ಗಿಡ ಬಾಡಿ ತತ್ತರಿಸುತ್ತಿದೆ. ಮ್ಯಾಗ್ನೋಲಿಯಾ (ಒಂದು ಬಗೆಯ ಸಂಪಿಗೆ) ಮರದ ಎಲೆಗಳು ಒಣಗಿ ಉದುರುತ್ತಿವೆ. ಎಷ್ಟೋ ಚಿಕ್ಕ ಪುಟ್ಟ ಗಿಡಗಳು ನಿರ್ನಾಮವಾಗಿವೆ. ಸಿಡ್ನಿಯಲ್ಲೆಲ್ಲಾ ಹೊಗೆ ತುಂಬಿಕೊಂಡು ಒಮ್ಮೊಮ್ಮೆ ಜಗತ್ಪ್ರಸಿದ್ಧ ಎನಿಸಿದ ಅಪೇರಾ ಹೌಸ್ ಮತ್ತು ಹಾರ್ಬರ್ ಬ್ರಿಡ್ಜುಗಳು ಅಗೋಚರವಾಗಿವೆ. ಹತ್ತಿರ ಹೋಗುವವರೆಗೂ ಅವು ಕಾಣುವುದಿಲ್ಲ. ವಾಯುಮಾಲಿನ್ಯ ದೆಹಲಿ, ಬೀಜಿಂಗುಗಳನ್ನೂ ಮೀರಿಸಿದೆ. ಇಲ್ಲಿ ವಾಕಿಂಗ್ ಹೋಗುವುದು ವಾಯುವಿಹಾರವಲ್ಲ, ವಾಯುಶಿಕ್ಷೆ ಎನಿಸಿದೆ. ಈ ಹೊಗೆ ಸಂಚರಿಸುತ್ತಾ ದಕ್ಷಿಣ ಅಮೆರಿಕಾದ ಚಿಲಿ ನಗರವನ್ನು ತಲಪಿದೆ. ಬಾಹ್ಯಾಕಾಶ ಕ್ಷಿಪಣಿಗಳಿಂದ ಭೂಮಿಯನ್ನು ನೋಡಿದರೆ ಇದು ಕಾಣಿಸುತ್ತದೆ.

2020ನ್ನು ಪ್ರವೇಶಿಸುತ್ತಿದ್ದಂತೆ ಇದು ನಮ್ಮ ಕತೆ. ಎರಡು ವರ್ಷಗಳಿಂದ ಮಳೆ ಇಲ್ಲ. 'ಮಿತವಾಗಿ ನೀರನ್ನು ಬಳಸಿ' ಎಂಬ ಕೋರಿಕೆಯನ್ನು ಜಲಮಂಡಲಿ ನೀಡಿದೆ. ತಪ್ಪಿತಸ್ಥರಿಗೆ ದಂಡ ಕೂಡ. ಇದೇ ಸಾಕಾಗಿತ್ತು ನಮಗೆ. ಎರಡು ತಿಂಗಳುಗಳಿಂದ ಹೊತ್ತಿ ಉರಿಯುತ್ತಿರುವ ಕಾಡ್ಗಿಚ್ಚು ಬೇರೆ. ಕಳೆದ ನಲವತ್ತು ವರ್ಷಗಳಲ್ಲಿ ಇಂತಹ ಭೀಕರತೆಯನ್ನು ಕಂಡಿರಲಿಲ್ಲ. ಸುಮಾರು 10.7 ದಶಲಕ್ಷ ಹೆಕ್ಟೇರುಗಳಷ್ಟು ಅಂದರೆ ಐರ್ಲೆಂಡಿನ ಗಾತ್ರಕ್ಕೆ ಸಮನಾದ ಭೂಮಿ ಅಗ್ನಿಗೆ ಆಹುತಿಯಾಗಿದೆ ಎಂದಾಗ ಇದರ ಅಗಾಧತೆಯ ಅರಿವಾಗುತ್ತದೆ.

ಟೆಲಿವಿಷನ್ ನೋಡಿದರೆ ಅದೇ ಸುದ್ದಿ. ಕುದುರೆ ಓಡುವ ರೀತಿಯಲ್ಲಿ ಬೆಂಕಿ ಚಲಿಸುತ್ತಿದೆ. ಜ್ವಾಲೆ ಇಪ್ಪತ್ತು ಮೀಟರ್ ಎತ್ತರ ಇದ್ದರೂ ಇದ್ದೀತು. ಅದರ ದಾರಿಯಲ್ಲಿ ಸಿಕ್ಕಿದ ಮನೆ, ಮರ ಕ್ಷಣಮಾತ್ರದಲ್ಲಿ ನಾಶ. "ಮಡದಿ ಮಗು, ಮನೆ ಮಾರು, ರಾಜ್ಯ ಗೀಜ್ಯ ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ." ಕೆಲವು ಊರುಗಳಲ್ಲಿ ಬೀದಿಯ ಮನೆಗಳೆಲ್ಲ ಸುಟ್ಟು ಉಳಿದಿರುವುದು ಕೇವಲ ಛಾವಣಿಯ ಶೀಟುಗಳು, ಅವುಕೂಡ ನಾನಾರೀತಿಯಲ್ಲಿ ಬಗ್ಗಿ ಹೋಗಿವೆ. ಇಂತಹ ಊರುಗಳು ಒಂದಲ್ಲ ಎರಡಲ್ಲ, ಹಲವಾರು. ಅವುಗಳ ಅವಶೇಷಗಳನ್ನು ನೋಡಿದರೆ ಸಿರಿಯಾ ಮತ್ತಿತರ ದೇಶಗಳ ರಣಭೂಮಿಯನ್ನು ಹೋಲುತ್ತವೆ. ಯಾರಾದರೂ ಬಾಂಬ್ ಹಾಕಿದ್ದಾರೆಯೇ ಇಲ್ಲಿ? ಎನಿಸುತ್ತದೆ. ಮಧ್ಯಾಹ್ನ ಎರಡು ಗಂಟೆಗೇ ನಡುರಾತ್ರಿಯ ಕತ್ತಲೆ ಆವರಿಸಿದೆ ಕೆಲವು ಊರುಗಳಲ್ಲಿ.

ಸಿಡ್ನಿಗೆ ದಕ್ಷಿಣಕ್ಕೆ 500 ಕಿಲೋಮೀಟರ್ ದೂರದಲ್ಲಿರುವ ಈಡೆನ್ ಊರಿನಲ್ಲಿನ ಮರದ ಕಾರ್ಖಾನೆಗೆ ತಗುಲಿದ ಬೆಂಕಿ ಐದು ದಿನಗಳಿಂದ ಉರಿಯುತ್ತಲೇ ಇದೆ. ಅದು 600 ಜನರಿಗೆ ಉದ್ಯೋಗವನ್ನು ನೀಡಿದ ಉದ್ದಿಮೆ. ಅದರ